Excluding of Class IV Employees of all aided Schools from the Triple Benefit Scheme.

*Q.—1122. Sri R. N. LAKSHMIPATHI (Gowribidanur):—

Will the Government be pleased to state.—

whether it is a fact that Class IV employees of all aided schools are excluded from the Triple Benefit Scheme, as per the recent Government Order?

A.—Sri S. R. KANTHI (Minister for Education).—

Yes.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಏಡೆಡ್ ಸ್ಕೂಲುಗಳಲ್ಲಿ ಜವಾನರನ್ನು ಮಾತ್ರ ಬಿಟ್ಟು ಅಧ್ಯಾಪಕರು, ಮತ್ತು ಗುಮಾಸ್ತರುಗಳಿಗೆ ಮಾತ್ರ ತ್ರಿವಿಧ ಸೌಲಭ್ಯ ಯೋಜನೆಯನ್ನು ಅನ್ವಯಿಸಿದ್ದಾರೆ. ಜವಾನರು ಬಹಳ ಕಡಮೆ ಸಂಬಳ ಪಡೆಯುತ್ತಿರುವುದರಿಂದ ಇವರಿಗೂ ಆ ಯೋಜನೆಯನ್ನು ಅನ್ವಯಿಸುವುದು ಧರ್ಮವಲ್ಲವೇ ಸ್ವಾಮಿ?

† ಶ್ರೀ ಎಸ್. ಆರ್. ಕಂಠಿ.—ನ್ಯಾಯ ದೃಷ್ಟಿಯಿಂದ ಏನಾದರೂ ಹೇಳಬಹುದು. ಈ ವಿಚಾರವನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ತ್ರಿವಿಧ ಸೌಲಭ್ಯ ಎಂದರೆ ಮೂರು ವಿಧ; ಅದರಲ್ಲಿ ಪ್ರಾವಿಡೆಂಟ್ ಫಂಡ್, ಇನ್‌ಷೂರೆನ್ಸ್ ಮತ್ತು ಪೆನ್‌ಷನ್ ಮೂರೂ ಸೇರುತ್ತವೆ. ಇದರಲ್ಲಿ ಪ್ರಾವಿಡೆಂಟ್ ಫಂಡ್ ಕೆಳಗೆ ನಾಲ್ಕನೇ ದರ್ಜೆಯವರಾದ ಜವಾನರು ಬರುವುದು ಕಷ್ಟವಾದದ್ದು, ಇನ್‌ಷೂರೆನ್ಸ್ ಸಹ ಕಷ್ಟವಾದದ್ದು ಎಂದು ತಿಳಿದು ಅವರಿಗೆ ತ್ರಿವಿಧ ಸೌಲಭ್ಯವನ್ನು ಅನ್ವಯಿಸುವುದು ಸಾಧ್ಯವಿಲ್ಲವೆಂದು ಆ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಂದು ಶಾಲೆಯಲ್ಲಿ ಹುಡುಗರ ಸಂಖ್ಯೆಯ ಆಧಾರದ ಮೇಲೆ ಅಧ್ಯಾಪಕರಿರುತ್ತಾರೆ. ಜವಾನರು ಮಾತ್ರ ಒಬ್ಬರೋ ಅಥವಾ ಇಬ್ಬರೋ ಇರುತ್ತಾರೆ. ಅಷ್ಟು ಜನ ಅಧ್ಯಾಪಕರಿಗೆ ಈ ಯೋಜನೆಯನ್ನು ಅನ್ವಯಿಸುವಾಗ ಒಬ್ಬಬ್ಬ ಜವಾನರಿಗೆ ಈ ಸೌಲಭ್ಯಗಳನ್ನು ಕೊಡದೆ ಇರುವುದು ಬಹಳ ಅನ್ಯಾಯ. ಇದನ್ನು ತೀವ್ರವಾಗಿ ಆಲೋಚನೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು. Half the amount will have to be paid by the employee and it is difficult for a person with a small income to pay that much. He must insure for a minimum sum of Rs. 1,500 and he cannot pay the premium. It is impossible for him to pay insurance premium as well as provident fund.

ಶ್ರೀ ಗಂಗಾಧರ ನಾಮೋಷಿ.—40 ರೂಪಾಯಿ ಸಂಬಳ ಪಡೆಯತಕ್ಕ ಮಿಲ್ ಕೆಲಸಗಾರನಿಗೆ ಪ್ರಾವಿಡೆಂಟ್ ಫಂಡ್ ಕೊಡುವುದಕ್ಕೆ ಯೋಗ್ಯತೆ ಇದೆ ಎಂದು ಕಾಯದೆ ಅನ್ವಯಿಸುತ್ತೀರಿ. ಇಲ್ಲಿಯೂ ಏಕೆ ಅನ್ವಯಿಸಬಾರದು?

ಶ್ರೀ ಎಸ್. ಆರ್. ಕಂಠಿ.—ಅಲ್ಲಿ ಕೆಲಸಗಾರ ಕೊಡುವುದಿಲ್ಲ. Mill workers get so many benefits. They get bonus.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪ್ರಾವಿಡೆಂಟ್ ಫಂಡ್ ಮತ್ತು ಇನ್‌ಷ್ಯೂರೆನ್ಸ್ ಕೊಡಲು ಸಂಬಳ ಕಡಮೆಯಾಗಿರುವುದರಿಂದ ತೊಂದರೆಯಾಗಬಹುದು. ಅಧ್ಯಾಪಕರಿಗೆ ಪೆನ್‌ಷನ್ ಕೊಡುವಾಗ ಒಂದು ಮಿನಿಮಂ ಕೊಡುತ್ತಿದ್ದೀರಿ. ಅದೇ ರೀತಿ ಜವಾನರಿಗೂ ಕೊಡುವಂತೆ ಮಾಡುವುದಕ್ಕೆ ತೊಂದರೆ ಏನು, ಸ್ವಾಮಿ?

Sri S. R. KANTHI.—If it is single benefit, we can think of Some thing. But it is triple benefit.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಪ್ರಾವಿಡೆಂಟ್ ಫಂಡ್ ಮತ್ತು ಇನ್‌ಷ್ಯೂರೆನ್ಸ್ ಕೊಡುವುದಕ್ಕೆ ಕಡಮೆ ಸಂಬಳ ಬರುವುದರಿಂದ ಕಷ್ಟವಾಗುತ್ತದೆ ಎಂದು ಹೇಳಿದರು. ಅವರಿಗೆ ಪೆನ್‌ಷನ್ ಕೊಡಬೇಕು ಎಂದರೆ ಟ್ರಿಪಲ್ ಬೆನಿಫಿಟ್ ಸ್ಕೀಂ ಎಂದು ಹೇಳುತ್ತಾರೆ. ಆದುದರಿಂದ ಈ ಮೂರೂ ಅನ್ವಯಿಸುವ ಹಾಗೆ ಮಾಡಿ, ಏಡೆಡ್ ಸ್ಕೂಲ್ ನೌಕರರಾದ ಜವಾನರಿಗೂ ಸಹಾಯವಾಗುವಂತೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ. ಬಹಳ ತೊಂದರೆಗಳಿವೆ.

Basic pay given to Draftsmen, Civil and Mechanical diploma holders of Industrial Training Institute.

*Q—618. Sri T. K. KAMBLI (Kundgol).—

Will the Government be pleased to state :—

(a) the basic pay given to Draftsmen, Civil and Mechanical Diploma Holders of Industrial Training Institute by the Public Works Department as per the Scheme of the Government of India ;

(b) whether the revised pay scales of 1961 has been given to them (detailed information in this behalf may be furnished) ?

A.—Sri G. B. SHANKARA RAO (Parliamentary Secretary to the Minister for Public Works).—

(a) Rs. 150 in the scale of Rs. 150-8-190-10-320 as per existing order.

(b) Yes.

ಶ್ರೀ ಟಿ. ಕೆ. ಕಂಬ್ಳಿ.—ಇಲ್ಲಿ ಹೇಳಿರುವ ಪ್ರಕಾರ 150–320 ಸ್ಕೇಲನ್ನು ಯಾವ ಸಾಲಿನಿಂದ ಕೊಡುವುದಕ್ಕೆ ಪುರು ಮಾಡಿದ್ದೀರಿ ?

Sri G. B. SHANKARA RAO.—From the year 1961. Service matters are governed by cadre and recruitment rules.

ಶ್ರೀ ಟಿ. ಕೆ. ಕಂಬ್ಳಿ.—1961ರಲ್ಲಿ ಈ ಸ್ಕೇಲು ಮಂಜೂರಾಗಿದೆ. ಇದನ್ನು ಹಾರಿಗೆ ಕೊಡಲು ಏಕೆ ಇಷ್ಟು ತಡವಾಗಿದೆ ?

ಶ್ರೀ ಜಿ. ಬಿ. ಶಂಕರರಾವ್.—1961 ರಿಂದ ಕೊಡಬೇಕೆಂದು ಮಾಡಿದ್ದೇವೆ. 36 ತಿಂಗಳು ಅಭ್ಯಾಸ ಮಾಡಿದ ಡಿಪ್ಲೊಮಾಧಾರಿಗಳಿಗೂ 18 ತಿಂಗಳು ವ್ಯಾಸಂಗಮಾಡಿದ ಸರ್ಟಿಫಿಕೇಟ್ ಧಾರಿಗಳಿಗೂ ಅಧ್ಯಯನದಲ್ಲಿ ವ್ಯತ್ಯಾಸವಿದ್ದುದರಿಂದ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದ್ದ ಕಾರಣ ತಡವಾಯಿತು.

ಶ್ರೀ ಟಿ. ಕೆ. ಕಂಬ್ಳಿ.—ಈ ಸ್ಕೇಲಿನಲ್ಲಿ ಎಷ್ಟು ವರ್ಷ ಕೆಲಸ ಮಾಡಿದರೆ ಖಾಯಂ ಆಗುತ್ತದೆ ? ನಿಮ್ಮ ಇರಾಖೆಯಲ್ಲಿ ಹಲವು ವರ್ಷಗಳು ಕೆಲಸ ಮಾಡಿದರೂ ಟೆಂಪೊರರಿ ಎಂದು ಇಡುವುದಕ್ಕೆ ಕಾರಣವೇನು ?

Sri G. B. SHANKARA RAO.—From the year 1961, service matters are governed by cadre and recruitment rules.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಮೆಕ್ಯಾನಿಕಲ್ ಡಿಪ್ಲೊಮಾ ಹೋಲ್ಡರುಗಳು ಕೆಲಸ ಬೇಡಿ ತಮ್ಮ ಮುಂದೆ ಅರ್ಜಿ ಸಲ್ಲಿಸಿದ್ದಾರೆ ?

ಅಧ್ಯಕ್ಷರು.—ಆ ಅಂಕಿಅಂಶಗಳ ಬಗ್ಗೆ ಬೇರೆ ಪ್ರಶ್ನೆಹಾಕಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1961ನೆಯ ರಿವೈಸ್ಡ್ ಸ್ಕೇಲ್ ಪ್ರಕಾರ ಎಷ್ಟು ಜನಕ್ಕೆ ನಮ್ಮ ರಾಜ್ಯದಲ್ಲಿ ಬೆನಿಫಿಟ್ ಆಗುತ್ತದೆ ?

(No reply)